**ದಿನಾಂಕಃ 15/11/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿತರ ಪರ ಶ್ರೀ ಎ.ಪಿ ವಕೀಲರಿಂದಃ**

1. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಆಂಗ್ಲಭಾಷೆ ಓದಲು ಬರೆಯಲು ಗೊತ್ತಿಲ್ಲ. ನಾನು ಪಿರಿಯಾಪಟ್ಟಣ ಮತ್ತು ನಿಲಂಗಾಲ ಗ್ರಾಮದಲ್ಲಿ ವಾಸಿಸುತ್ತೇನೆ. ನಾನು 2017-18 ರಲ್ಲೂ ಸಹ ಪಿರಿಯಾಪಟ್ಟಣ ಮತ್ತು ನಿಲಂಗಾಲ ಗ್ರಾಮದಲ್ಲಿ ವಾಸಿಸುತ್ತಿದ್ದೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಸರಿನಲ್ಲಿ 32 ಗುಂಟ ಜಮೀನು ಇತ್ತು. ಕಳೆದ ವರ್ಷ ಮಾರಾಟ ಮಾಡಿದ್ದೇನೆ. ವ್ಯವಸಾಯ ನಾನೇ ಮಾಡುತ್ತೇನೆ. 2017-18 ರಲ್ಲೂ ನಾನೇ ವ್ಯವಸಾಯ ಮಾಡುತ್ತಿದ್ದೆ. ವ್ಯವಸಾಯ ಮಾಡುತ್ತಿದ್ದ ಬಗ್ಗೆ ದಾಖಲೆ ನೀಡಿಲ್ಲ, ನೀಡುತ್ತೇನೆ. 2017-18 ರಲ್ಲಿ ಸರ್ವೆ ನಂ. 38 ಪೋಡು ಗೊತ್ತಿಲ್ಲ, ಅದರಲ್ಲಿ ಶುಂಠಿ ಬೆಳೆಯುತ್ತಿದ್ದೆ. ಸದರಿ ಸರ್ವೆ ನಂಬರ್ ನಲ್ಲಿ 4 ಎಕರೆ 8 ಗುಂಟೆ ಜಮೀನು ಇದೆ. ನಾನು ಪೂರ್ಣ ಜಮೀನಿಗೂ ಶುಂಠಿ ಬೆಳೆದಿದ್ದೆ. ಅದು 446 ಮೂಟೆ ಶುಂಠಿ ಬೆಳೆಯಾಗಿತ್ತು. ರೂ.3,750/- ರಂತೆ ಮಾರಾಟ ಮಾಡಿದ್ದೆ. ಅದರ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಜಮೀನಿನ ಬಳಿ ಕೇರಳದವರು ಬಂದು ತುಂಬಿಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಅವರ ಹೆಸರು ವಿಳಾಸ ಗೊತ್ತಿಲ್ಲ. ಆ ವರ್ಷದಲ್ಲಿ ಬೆಳೆ ಬೆಳೆಯಲು ಸುಮಾರು 4 ಲಕ್ಷ ಖರ್ಚಾಯಿತು. ಖರ್ಚು ಕಳೆದು ಸುಮಾರು 9-10 ಲಕ್ಷ ಆದಾಯ ಬಂತು. ಆ ಹಣವನ್ನು ನನ್ನ ಖಾತೆಯಲ್ಲಿ ಜಮಾ ಮಾಡಿರಲಿಲ್ಲ.

2. 2017-18 ರಲ್ಲಿ ಸೈಯದ್ ನೂರುಲ್ಲಾ ಎಂಬುವವರಿಗೂ ಸಹ ಸಾಲ ನೀಡಿದ್ದೆ. ಆರೋಪಿತ ಮತ್ತು ಸೈಯದ್ ನೂರುಲ್ಲಾ ರವರಿಗೆ ಬಿಟ್ಟು ಬೇರೆ ಯಾರಿಗೂ ಸಾಲವನ್ನು ನೀಡಿಲ್ಲ. ನಾನು, ಆರೋಪಿತ, ನಿಂಗರಾಜು, ನಂದೀಶ ಎಂಬುವವರು ಸ್ನೇಹಿತರು ಎಂದರೆ ಸರಿಯಲ್ಲ. ನಾವೆಲ್ಲರೂ ಬ್ಯಾಂಕಿನಲ್ಲಿ ಸಾಲ ಕೊಡಿಸಲು ಓಡಾಡುತ್ತಿದ್ದೆವು ಎಂದರೆ ಸರಿಯಲ್ಲ.

3. ಆರೋಪಿತ 2017 ರಲ್ಲಿ ಸಾಲ ಕೇಳಿದ್ದರು. ದಿನಾಂಕ, ತಿಂಗಳು ನೆನಪಿಲ್ಲ. ನನಗೆ ಆರೋಪಿತ ಚೆಕ್ ನೀಡಿದ 4 ತಿಂಗಳು ಮುಂಚೆ ಸಾಲ ಕೇಳಿದ್ದರು. ಆಗ ನಾನು ಹಣ ಕೊಟ್ಟಿದ್ದೆ. ಆರೋಪಿತ ಯಾವುದೋ ವ್ಯವಹಾರ ಮಾಡಬೇಕೆಂದು ಸಾಲ ಕೇಳಿದ್ದರು. ಆರೋಪಿತ ಸಾಲ ಕೇಳುವಾಗ ಕೃಷ್ಣ ಮತ್ತು ಶ್ರೀಶೈಲ ಎಂಬುವವರು ಇದ್ದರು. ಆರೋಪಿತ ಪಿರಿಯಾಪಟ್ಟಣದಲ್ಲಿ ಸಾಲ ಕೇಳಿದ್ದರು. ನಾನು ಹಣ ನೀಡುವಾಗ ಶ್ರೀಶೈಲ ಇದ್ದರು. ಹಣ ಕೊಟ್ಟ 4 ತಿಂಗಳ ನಂತರ ಕಾವೇರಿ ಕಲ್ಪತರು ಬ್ಯಾಂಕ್, ಮಾಕೋಡು ಶಾಖೆಯ ಚೆಕ್ ಸಂಃ080712 ನ್ನು ನೀಡಿದ್ದರು.

(ಮುಂದುವರೆದ ಪಾಟೀಸವಾಲನ್ನು ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**